# ಸಾಧನಾ ಸಮಾಧಿ ಸಂಯಮದ ಪ್ರಕ್ರಿಯೆ ಮತ್ತು ವಿಜಯ

- ಸಾಧನ್ ಭಟ್ಟಾಚಾರ್ಯ **[2023]**

1.ಸಾಧನೆ - ಹಿನ್ನೆಲೆ
2. ಸಾಧನೆ ಮತ್ತು ಸಮಾಧಿ (ಅಮರ್ಕಂಟಕ್)
    2.1 ಸಮಾಧಿಯ ವಿವರಣೆ
3. ಸಮಾಧಿ ನಂತರ: ದೇಹದ ಅಧ್ಯಾಸದ ನಂತರ ಮಾನಸಿಕ ಸ್ಥಿತಿ ಮತ್ತು ಸಂಯಮದ ತೀರ್ಮಾನ.
4 ಸಂಯಮದ ಪ್ರಕ್ರಿಯೆ
5. ಸಂಯಮದಲ್ಲಿ ವಿಜಯ: ಪ್ರಮುಖ ಅಂಶಗಳು
6. ಸಂಯಮದ ಪ್ರಕಾಶದಲ್ಲಿ
    a) ಸಮಾಧಿಯ ವಿಮರ್ಶೆ
    b) ಪರಂಪರೆಯಿಂದ ಭಿನ್ನತೆ ಮತ್ತು ವಿಕಲ್ಪ

1. ಸಾಧನೆ ಹಿನ್ನೆಲೆ

ತಮ್ಮ ವೇದಮೂರ್ತಿ ಮಾಮಾಶ್ರೀಯವರಲ್ಲಿ ವೇದಾಂತವನ್ನು ಕಲಿಯುತ್ತಿದ್ದಾಗ ಕೆಲವು ಜಿಜ್ಞಾಸೆಗಳು ಮೂಡಿತು. ಬ್ರಹ್ಮನು ಜೀವಿಯ ಹೃದಯದಲ್ಲಿ ಆತ್ಮದ ರೂಪದಲ್ಲಿ ಕುಳಿತಿದ್ದಾನೆ ಎಂದು ವೇದಾಂತದಲ್ಲಿ ವಿವರಿಸಲಾಗಿದೆ (ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರ ಒಂದಾದ ರೂಪ) ಇದರಿಂದಾಗಿ ಜೀವಿಯು ಕರ್ಮ ಬಂಧನದಲ್ಲಿ ಬರುತ್ತದೆ. ಆತ್ಮವು ಮತ್ತೆ ಬ್ರಹ್ಮದೊಂದಿಗೆ ವಿಲೀನಗೊಂಡಾಗ ಮೋಕ್ಷವು ಸಂಭವಿಸುತ್ತದೆ. ಇದನ್ನು ಕುರಿತು ಯುವಕ ನಾಗರಾಜ ಅವರ ಮನದಲ್ಲಿ ಹಲವು ಪ್ರಶ್ನೆಗಳು ಹುಟ್ಟಿಕೊಂಡವು. ಉದಾಹರಣೆಗೆ,

೧. ಬ್ರಹ್ಮನು ಆತ್ಮದ ರೂಪದಲ್ಲಿ ಜೀವಿಯ ಹೃದಯದಲ್ಲಿ ಕುಳಿತನು. ಇದರಿಂದಾಗಿ ಜೀವಿಯು ಕರ್ಮ ಬಂಧನಕ್ಕೆ ಒಳಗಾಯಿತು. ಯಾವಾಗ ಆತ್ಮವು (ಬ್ರಹ್ಮ) ಜೀವಿಯ ಹೃದಯದಲ್ಲಿ ನೆಲೆಗೊಂಡಿರಲಿಲ್ಲವೋ ಆಗ ಜೀವಿಯು ಕರ್ಮ ಬಂಧನದಲ್ಲಿ ಇರಲಿಲ್ಲ. ಆದ್ದರಿಂದ ಆತ್ಮವೇ (ಬ್ರಹ್ಮ) ಬಂಧನಕ್ಕೆ ಕಾರಣವಾಗಿತ್ತು. ಬ್ರಹ್ಮ, ಬಂಧನ ಹಾಗು ಮೋಕ್ಷ, ಈ ಎರಡಕ್ಕೂ ಹೇಗೆ ಕಾರಣವಾಗುವುದು?

೨. ಬ್ರಹ್ಮವು ಕರ್ಮ ಬಂಧನಕ್ಕೆ ಒಳಗಾಗುತ್ತಿದೆ, ಅಂದರೆ ಮಾಯೆ ಎಂಬ ವಸ್ತು ಬ್ರಹ್ಮಕ್ಕಿಂತ ಬಲವಾಗಿದೆಯೇ?

ಹೀಗೆ ಹಲವು ಪ್ರಶ್ನೆಗಳು ಹುಟ್ಟಿಕೊಂಡವು. ಇದನ್ನು ಸ್ಪಷ್ಟಪಡಿಸುವ ಸಲುವಾಗಿ ಅಂದಿನ ವಿದ್ವಾಂಸರೊಂದಿಗೆ ಸಭೆ ನಡೆಸಲಾಯಿತು.

ಅವರಲ್ಲಿ ಪ್ರಮುಖರು ಶೃಂಗೇರಿಯ ಅಂದಿನ ಜಗದ್ಗುರು ಸ್ವಾಮಿ ಚಂದ್ರಶೇಖರ ಭಾರತಿ ಮತ್ತು ರಮಣ ಮಹರ್ಷಿಗಳು. ಇಬ್ಬರೂ ಮಹಾನ್ ವ್ಯಕ್ತಿಗಳು "ನೀವು ಅನುಭವಿಸಬೇಕು" ಎಂದು ಹೇಳಿದರು. ಚಂದ್ರಶೇಖರ ಭಾರತಿ ಮಹಾಸ್ವಾಮೀಜಿ ಅವರು ಅನುಭವಕ್ಕಾಗಿ ನರ್ಮದಾ ನದಿಯ ದಡದಲ್ಲಿ ಭಜನೆ ಮಾಡಲು ಸೂಚಿಸಿದರು. ಅವರ ಸೂಚನೆಯಂತೆ ದಂಪತಿಗಳು 31 ಡಿಸೆಂಬರ್ 1949 ರಂದು ಅಮರಕಂಟಕ್ ತಲುಪಿದರು.

2. ಸಾಧನೆ ಮತ್ತು ಸಮಾಧಿ (ಅಮರ್ಕಂಟಕ್)

    a. ಸಮಾಧಿಯ ವಿವರಣೆ: ಯುವಕ ನಾಗರಾಜ್ ಅವರು ತಮ್ಮ ಕುಟುಂಬ ಸಂಪ್ರದಾಯದಲ್ಲಿ ಪ್ರಚಲಿತದಲ್ಲಿರುವ ಶ್ರೀ ವಿದ್ಯೆ ಪೂಜೆ ವಿಧಾನವನ್ನು ಅಭ್ಯಾಸ ಮಾಡುತ್ತಿದ್ದರು. ಈ ವಿಧಾನದಲ್ಲಿ, ಕ್ರಿಯೆ ಶಕ್ತಿ, ಇಚ್ಛೆ ಶಕ್ತಿ ಮತ್ತು ಜ್ಞಾನ ಶಕ್ತಿಯ ಜಾಗೃತಿ ಖಚಿತ. ಅಮರಕಂಟಕ್‌ಗೆ ಬಂದ ನಂತರ, ಅವರು ಈ ವಿಧಾನವನ್ನು ಬಳಸಿಕೊಂಡು ಸಾಧನೆಯನ್ನು ಮುಂದುವರಿಸಲು ನಿರ್ಧರಿಸಿದರು. ಜ್ಞಾನದ ಶಕ್ತಿಯನ್ನು ಜಾಗೃತಗೊಳಿಸಿದಾಗ, ಸಂಪೂರ್ಣ ಅಜ್ಞಾತ ಜ್ಞಾತ ಅಂದರೆ ತಿಳಿಯುತ್ತದೆ ಮತ್ತು ಸಂಪೂರ್ಣ ಅಪ್ರಾಪ್ತ ಪ್ರಾಪ್ತಿಯಾಗುತ್ತದೆ ಎಂದು ಹೇಳಲಾಗಿದೆ. ಈ ಭರವಸೆಯು ಪತಂಜಲಿ ಯೋಗ ದರ್ಶನದಲ್ಲಿ ಉಲ್ಲೇಖಿಸಲಾದ ಸಮಾಧಿಯ ಫಲಿತಾಂಶಗಳನ್ನು ಹೋಲುತ್ತದೆ. **1950**ರ ಗುರುಪೂರ್ಣಿಮೆಯಿಂದ ಸಾಧನೆ ಪ್ರಾರಂಭ ಮಾಡಿದರು**.** ಆರಂಭದಲ್ಲಿ ಬೆಳಗ್ಗೆ **6**ರಿಂದ ಸಂಜೆ **6**ರವರೆಗೆ ಧ್ಯಾನ ಮಾಡಲು ನಿರ್ಧರಿಸಿದರು**.** ಕೆಲವು ವರ್ಷಗಳ ನಂತರ, ಅವರು ಪ್ರಾತಃ ಕಾಲ **2**

ರಿಂದ ಮಧ್ಯಾಹ್ನ **2** ರವರೆಗೆ ಧ್ಯಾನವನ್ನು ಮುಂದುವರೆಸಿದರು**.** ಮೂರನೇ ಮತ್ತು ಅಂತಿಮ ಹಂತದಲ್ಲಿ**,** ಸಂಜೆ **6** ರಿಂದ ಬೆಳಿಗ್ಗೆ **6** ರವರೆಗೆ ಸಾಧನೆ ಮಾಡುತ್ತಿದ್ದರು**.** ಸಾಧನೆ**, 60** ರ ದಶಕದಲ್ಲಿ ಪ್ರೌಢಾವಸ್ಥೆಯನ್ನು ತಲುಪಿತು**. 1966** ರ ಗುರು ಪೂರ್ಣಿಮೆಯಂದು**,** ಅವರು ತಮ್ಮಲ್ಲಿ ಸಾಧನೆ ಸಮಾಧಿ ಸ್ಥಿತಿಯನ್ನು ಸ್ವೀಕರಿಸಿದರು.

2.1. ಸಮಾಧಿ

ಈ ಸ್ಥಿತಿಯಲ್ಲಿ

a) ನನ್ನ "ಆಸೆಗಳು, ಆಲೋಚನೆಗಳು ಮತ್ತು ಇಚ್ಛೆಗಳು ಮೌನವಾಗುತ್ತವೆ"
b) "ನಾನು ಇರುವೆನು, ಎಂಬುವುದು ಉಳಿದಿದೆ"
c) "ಹಗಲಿನಲ್ಲಿ ಬೆಳಕು ಇದ್ದಾಗ, ನೀರಿನಲ್ಲಿ ಮುಳುಗಿದ ನಂತರ ಕಣ್ಣು ತೆರೆದಾಗ ಕಾಣುವಂತೆ ಗೋಚರಿಸುತ್ತದೆ. ಇದನ್ನು ವ್ಯಾಪಕ ವಸ್ತು ಅಥವಾ ಬ್ರಹ್ಮ ಎಂದು ಕರೆಯಲಾಗುತ್ತದೆ".
d) "ದೇಶ (ಸ್ಥಾನ), ಕಾಲ (ಸಮಯ) ಮತ್ತು ಶರೀರದ (ದೇಹದ) ಭಾಸ - ಆಭಾಸ ಕೊನೆಗೊಂಡಿದೆ".
e) "ಹಿಂದಿನ ನೋವು ಮತ್ತು ಭವಿಷ್ಯದ ಭಯವಿಲ್ಲ".
f) ವ್ಯಾಪಕ ವಸ್ತುವಿನ (ಬ್ರಹ್ಮ) ಅಸ್ತಿತ್ವದ ಸಂಪೂರ್ಣ ಸ್ವೀಕಾರವಿತ್ತು.
g) "ಈ ಸ್ಥಿತಿಯನ್ನು ಸಂತೋಷ ಅಥವಾ ದುಃಖ, ಎರಡೂ ಕರೆಯಲಾಗುವುದಿಲ್ಲ".

ಈ ಸ್ಥಿತಿಯನ್ನು ಪತಂಜಲಿ ಯೋಗ ಸೂತ್ರದಲ್ಲಿ ಸಮಾಧಿ, ಆಗಮ ತಂತ್ರೋಪಾಸನೆಯ ವಿಧಾನದಲ್ಲಿ ಜ್ಞಾನ ಶಕ್ತಿಯ ಜಾಗೃತಿ, ಜ್ಞಾನ ಮಾರ್ಗ ಸಂಪ್ರದಾಯದಲ್ಲಿ ನಿದಿಧ್ಯಾಸನ ಮತ್ತು ವಿವಿಧ ಸಾಧನೆ ಸಂಪ್ರದಾಯಗಳಲ್ಲಿ ಅಭ್ಯುದಯ ನಿಃಶ್ರೇಯಸ, ನಿರ್ವಾಣ, ಕೈವಲ್ಯ, ಮೋಕ್ಷ ಇತ್ಯಾದಿ ಎಂದು ಕರೆಯಲಾಗುತ್ತದೆ.

2. 2. ಪರಂಪರೆಗಳಲ್ಲಿ ಸಮಾಧಿ ಎಂದರೇನು?

a. ಬ್ರಹ್ಮಭೂತ ಪ್ರಸನ್ನಾತ್ಮ ನ ಶೋಚತಿ ನ ಕಾಂಕ್ಷತಿ. ಸಂ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಮ್ || ಗೀತಾ 18/54.
b. ಭೀತ್ಯತೇ ಹೃದಯ ಗ್ರಂಥಿ ಛಿತ್ಯಂತೇ ಸರ್ವಶಂಶಾಯಾಃ ಕ್ಷಿಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟಾ ಪರಾವರೇ || ಮುಂಡಕೋಪನಿಷದ್ 2/ 2/ 8.
c. ಯೋಗಶ್ಚಿತ್ತ ವೃತ್ತಿಃ ನಿರೋಧಃ || ಯೋಗದರ್ಶನ / ಸಮಾಧಿಪಾದ / 2
d. ತದಾ ದೃಷ್ಟುಃ ಸ್ವ ಸ್ವರೂಪೇ ಅವಸ್ಥಾನಂ || ಯೋಗದರ್ಶನ / ಸಮಾಧಿಪಾದ / 3
e. ತದೇವರ್ಥ ಮಾತ್ರ ನಿರ್ಭಾಸಂ ಸ್ವರೂಪ ಶೂನ್ಯಮಿವ ಸಮಾಧಿ: || ಯೋಗದರ್ಶನ/ ವಿಭೂತಿಪಾದ/ 3

3. ಸಮಾಧಿ ಆದನಂತರ

ದೇಹದ ಅಧ್ಯಾಸಗಳು ಪುನಃ ಪ್ರಾರಂಭ ಆದನಂತರ ಮಾನಸಿಕ ಸ್ಥಿತಿ ಮತ್ತು ಸಂಯಮದ ತೀರ್ಮಾನ**:**

ಇದು ಬಹಳ ಮುಖ್ಯವಾದ ಭಾಗವಾಗಿದೆ. ಇದರಲ್ಲಿ, ಸಮಾಧಿಯ ನಂತರ ದೇಹ ಅಧ್ಯಾಸರಾದಾಗ, ಸಮಾಧಿ ಸ್ಥಿತಿಯಲ್ಲಿ ಸುಖ-ದುಃಖ ಮೀರಿದ ಅನುಭವ, ಎಲ್ಲರ ಮೇಲೆ ಭಾರಿ ಪ್ರಭಾವ ಬೀರುತ್ತದೆ. ಶರೀರ ಆಸಕ್ತಿ ಅಥವಾ ದೇಹದ ಆವಶ್ಯಕತೆ ಶೂನ್ಯವಾಗಿರುತ್ತದೆ. ಯಾವುದೇ ರೀತಿಯ ಚಟುವಟಿಕೆ, ಕ್ರಿಯೆಯಲ್ಲಿ ಪ್ರವೃತ್ತಿ ಇರುವುದಿಲ್ಲ. ಎಲ್ಲವೂ ನೆನಪಿಗೆ ಬರುತ್ತದೆ. ಉದಾಹರಣೆಗೆ: ನನ್ನ ಹೆಸರು, ಕುಟುಂಬದ ಪರಿಸ್ಥಿತಿ, ಹಿಂದಿನ ಮತ್ತು ಪ್ರಸ್ತುತ ಸಂದರ್ಭಗಳು, ನಾನೇಕೆ ಇಲ್ಲಿಗೆ ಬಂದೆ? ನನ್ನ ಪ್ರಶ್ನೆಗಳೇನು? ನನ್ನ ಪ್ರಶ್ನೆಗಳಿಗೆ ಉತ್ತರ ಸಿಕ್ಕಿತೋ ಇಲ್ಲವೋ? ಇವಲ್ಲದೆ ಇನ್ನಷ್ಟು ಪ್ರಶ್ನೆಗಳು ಎದ್ದವು**!** ಸಮಾಧಿಯ ಸ್ಥಿತಿಯಲ್ಲಿ ಈ ಪ್ರಶ್ನೆಗಳೆಲ್ಲ ಮಾಯವಾಗಿದ್ದವು **(** ನಿವಾರಣೆ**?)** ಆದರೆ ಈಗ ಮತ್ತೆ ಕಾಣಿಸಿಕೊಂಡವು**!!!** ಕೆಲವು ಹೊಸ ಸನ್ನಿವೇಶಗಳು ಅಥವಾ ಪ್ರಶ್ನೆಗಳು ಉದ್ಭವಿಸಿತು**.** ಸಮಾಧಿ ಸ್ಥಿತಿಯಲ್ಲಿ ನಾನು ಇದ್ದೇನೆ ಮತ್ತು ಬ್ರಹ್ಮ ಇದೆ ಎಂಬ ಅನುಭವ ಆಯಿತು**,** ಆದರೆ ಇಬ್ಬರೂ ಒಂದೇ ಎಂದು ಸ್ವೀಕಾರ ಆಗಲಿಲ್ಲ**.** ಇವೆರಡೂ ಬೇರೆ ಬೇರೆ ಎನ್ನುವುದೂ ಸ್ವೀಕಾರ ಆಗಲಿಲ್ಲ **!!** ಅಂದರೆ**,** ನಾಲ್ಕು ಮಹಾನ್ ವಾಕ್ಯಗಳೊಂದಿಗೆ ಯಾವುದೇ ಸಮ್ಮತಿ ಆಗಲಿಲ್ಲ**.**

ಮತ್ತ ತೈತಿರೀಯ ಉಪನಿಷತ್ತಿನಲ್ಲಿ ವಿವರಿಸಿರುವ ಸೃಷ್ಟಿಯ ಉತ್ಪತ್ತಿಯ ಬಗೆ ಸತ್ಯ, (ಬ್ರಹ್ಮದಿಂದ ಆಕಾಶ, ಆಕಾಶದಿಂದ ವಾಯು, ವಾಯುದಿಂದ ಅಗ್ನಿ, ಅಗ್ನಿಯಿಂದ ನೀರು ಮತ್ತು ನೀರಿನಿಂದ ಭೂಮಿ) ಇದನ್ನು ಸಹ ಸ್ವೀಕರಿಸಲಾಗಲಿಲ್ಲ.

# ಬ್ರಹ್ಮ ಮತ್ತು ಆಕಾಶ: ಇವೆರಡೂ ನಿರಾಕಾರ ವಸ್ತು: ಇದೂ ಸ್ವೀಕಾರ ಆಗಲಿಲ್ಲ
# ಒಂದು ನಿರಾಕಾರ ವಸ್ತುವಿನಿಂದ (ಬ್ರಹ್ಮ) ಇನ್ನೊಂದು ನಿರಾಕಾರ ವಸ್ತು (ಆಕಾಶ) ಹುಟ್ಟಿತು, ಇದೂ ಸ್ವೀಕಾರ ಆಗಲಿಲ್ಲ.
# ಇನ್ನೊಂದು ನಿರಾಕಾರ ವಸ್ತುವಿನಿಂದ (ಆಕಾಶದಿಂದ) ಒಂದು ಭೌತಿಕ ವಸ್ತು ಗಾಳಿಯು ರೂಪುಗೊಂಡಿತು. ಇದೂ ಸ್ವೀಕಾರ ಆಗಲಿಲ್ಲ.

ಅಂತಹ ಪರಿಸ್ಥಿತಿಯಲ್ಲಿ ಅವರ ಈ ಅನುಮಾನವನ್ನು ವ್ಯಕ್ತಪಡಿಸಿರು:

1. ನಾನು ಸಮಾಧಿಯನ್ನು ಪಡೆಯಲಿಲ್ಲವೇ ? ಅಥವಾ
2. ಸಮಾಧಿ ಸಾಧನೆಯ ಅಂತಿಮ ತಾಣವಲ್ಲವೇ ?

4. ಸಮಾಧಿ ಪ್ರಕ್ರಿಯ

ಸಮಾಧಿಯ ನಂತರ, ಶರೀರ ಅಧ್ಯಾಸ ಹಿದಿರುಗಿದಾಗ, ಕೆಲವೇ ದಿನಗಳಲ್ಲಿ "ನಾನು ಸಮಾಧಿಯನ್ನು ಪಡೆದಿಲ್ಲ ಅಥವಾ ಸಮಾಧಿಯು ಸಾಧನೆಯ ಅಂತಿಮ ತಾಣವಲ್ಲ" ಎಂದು ನಿರ್ಧರಿಸಲಾಯಿತು. ಇದನ್ನು ಪರೀಕ್ಷಿಸಲು, ಯೋಗ ದರ್ಶನದಲ್ಲಿ ವಿವರಿಸಿದ ಸಂಯಮವನ್ನು ಅಭ್ಯಾಸ ಮಾಡಲು ನಿರ್ಧರಿಸಲಾಯಿತು. "ತ್ರಯಂ ಏಕತ್ರ ಸಂಯಮಃ." ವಿಭೂತಿಪಾದ || 4.

ಸಮಾಧಿಯಲ್ಲಿ, ಆಸೆ, ಆಲೋಚನೆ ಮತ್ತು ಇಚ್ಛೆಗಳು ಶೂನ್ಯವಾಗುತ್ತವೆ. ಅಂದರೆ, ಆಸೆ, ಆಲೋಚನೆ ಮತ್ತು ಇಚ್ಛೆಗಳ ಯಾವುದೇ ಅಸ್ತಿತ್ವವಿಲ್ಲ, ಈ ಸಮಯದಲ್ಲಿ (ಸಮಾಧಿ ಸ್ಥಿತಿಯನ್ನು ತಲುಪಿದ ನಂತರ) ಚಿತ್ತನಲ್ಲಿ ಸಂಯಮದ ವಸ್ತು ಅಥವಾ ಪ್ರಶ್ನೆಗಳನ್ನು ಇಡಲಾಗುತ್ತದೆ. ಪ್ರಶ್ನೆಗಳನ್ನು ಇಡುವ ಮತ್ತು ಅವುಗಳ ಮೇಲೆ ಮಾಡುವ ಬೌದ್ಧಿಕ ಪ್ರಕ್ರಿಯೆಯ ಹೆಸರು ಸಂಯಮ. ಕೆಲವು ತಿಂಗಳ ಸಂಯಮ ಮಾಡಿದ ನಂತರ, "ನಾನು ಅನೇಕ ರೀತಿಯ ಶಬ್ದಗಳನ್ನು ಕೇಳಲು ಪ್ರಾರಂಭಿಸಿದೆ ಆದರೆ ಅವುಗಳ ಅರ್ಥವು ಸ್ಪಷ್ಟವಾಗಿಲ್ಲ".

"ಕೆಲವು ತಿಂಗಳುಗಳ ನಂತರ, ಅನೇಕ ಚಿತ್ರಗಳು ಕಾಣಿಸಿಕೊಳ್ಳಲು ಪ್ರಾರಂಭಿಸಿದವು, ಅವು ವೇಗವಾಗಿ ನನ್ನ ಮುಂದೆ ಹಾದುಹೋದವು, ಅವುಗಳ ಅರ್ಥವು ಸ್ಪಷ್ಟವಾಗಿಲ್ಲ, ಕೆಲವೇ ದಿನಗಳಲ್ಲಿ, ಎಲ್ಲಾ ಚಿತ್ರಗಳು ಸ್ಪಷ್ಟವಾಗಲು ಪ್ರಾರಂಭಿಸಿದವು. ನಂತರ ನಾನು ಎಷ್ಟು ಸಮಯ ಬಯಸಿದೇನೋ ಅವು ಅಷ್ಟು ಸಮಯ ನನ್ನ ಮುಂದೆ ಇದ್ದವು. ಹೀಗೆ ಇಡೀ ಅಸ್ತಿತ್ವವನ್ನು ಕ್ರಮೇಣವಾಗಿ ಅಧ್ಯಯನ ಮಾಡಲಾಯಿತು. ಈ "ಅಧ್ಯಯನ ಬೋಧ" ಆಗುವ ಕ್ರಮದಲ್ಲಿ, ವ್ಯಾಪಕ ಸತ್ವ ದಲ್ಲಿ ಸಂಪೃಕ್ತ ಪ್ರಕೃತಿಯು (ಮುಳುಗಿದ್ದು, ನೆನೆದಿದ್ದು ಮತ್ತು ಆವರಿಸಿದ್ದು) ಅನುಭವಕ್ಕೆ ಬಂದಿತು.

5. ಸಂಯಮದಲ್ಲಿ ಯಶಸ್ಸ: ಮುಖ್ಯ ಅಂಶಗಳು

a) ಸತ್ವದಲ್ಲಿ (ವ್ಯಾಪಕ ವಸ್ತು / ಆಕಾಶ / ಬ್ರಹ್ಮ / ಶೂನ್ಯ / ನಿರಾಕಾರ / ಸಂಪೂರ್ಣ / ಪರಮಾತ್ಮ / ಜ್ಞಾನ ಚೇತನಾ / ನಿರಪೇಕ್ಷ ಊರ್ಜೆ). ಇದು ಸಹ-ಅಸ್ತಿತ್ವದ ರೂಪದಳ್ಳಿ ಯಾವಾಗಲೂ ಇದೆ (ವರ್ತಮಾನದಲ್ಲಿದೆ).
b) ಅಸ್ತಿತ್ವದಲ್ಲಿ ಪ್ರಕೃತಿಯ ಮೂಲ ಘಟಕವೆಂದರೆ ಪರಮಾಣು, ಪರಮಾಣು ಸ್ವತಃ ವ್ಯವಸ್ಥೆಯ ರೂಪದಲ್ಲಿದೆ, ಪರಮಾಣುವಿಗೆ

1. ರಚನೆಯ ಪರಿಪೂರ್ಣತೆ (ಜೀವನ ಪದ / ಚೈತನ್ಯ ಪದ / ಅಮರತ್ವ).
2. ಕ್ರಿಯೆಯ ಪರಿಪೂರ್ಣತೆ (ಸಮಾಧಾನ / ಜಾಗೃತಿ) ಮತ್ತು
3. ನಡತೆ ಪರಿಪೂರ್ಣತೆ (ಗಮ್ಯಸ್ಥಾನ/ಪ್ರಾಮಾಣಿಕತೆ). ಇವೆಲ್ಲಾ ಇರುತ್ತದೆ. ಅಂದರೆ, ನಿರ್ಜೀವ ಪರಮಾಣುವೇ ಜಾಗೃತ ಸ್ಥಿತಿಗೆ ವಿಕಸಗೊಳ್ಳುತ್ತದೆ.
4. ಆತ್ಮ, ಬುದ್ಧಿ, ಚಿತ್ತ, ವೃತ್ತಿ ಮತ್ತು ಮನ ಜಾಗೃತ ಜೀವನದ ಬೇರ್ಪಡಿಸಲಾಗದ [ಅವಿಭಾಜ್ಯ] ಅಂಗಗಳಾಗಿವೆ.

5. ಜೀವನವು ಜಾಗೃತಗೊಂಡಾಗ, ಆತ್ಮ ವ್ಯಾಪಕ ವಸ್ತುವಿನಲ್ಲಿ ಪ್ರತ್ಯಾವರ್ತನೆ ಮೂಲಕ ಅನುಭವ ಸಂಪನ್ನ ಆಗುತ್ತದೆ. ಹಾಗೆಯೇ ಆತ್ಮದಲ್ಲಿ ಬುದ್ಧಿ; ಬುದ್ಧಿಯಲ್ಲಿ ಚಿತ್ತ; ಚಿತ್ತದಲ್ಲಿ ವೃತ್ತಿ; ವೃತ್ತಿಯಲ್ಲಿ ಮನ ಪ್ರತ್ಯಾವರ್ತಿತ ಆಗಿ ಇರುತ್ತವೆ.
6. ಭ್ರಮಿತ ಮಾನವ ತನ್ನ ಕೆಲಸವನ್ನು ಮಾಡಲು ಸ್ವತಂತ್ರನಾಗಿರುತ್ತಾನೆ ಮತ್ತು ಫಲವನ್ನು ಆನಂದಿಸಲು ಅವಲಂಬಿತನಾಗಿರುತ್ತಾನೆ.ಜಾಗೃತ ಮಾನವ ತನ್ನ ಕೆಲಸವನ್ನು ಮಾಡಲು ಮತ್ತು ಫಲವನ್ನು ಆನಂದಿಸಲು ಸ್ವತಂತ್ರನಾಗಿರುತ್ತಾನೆ.
7. ಜಾಗೃತ ಮಾನವರು ಏಕೀಕೃತ ಸಮಾಜ ಮತ್ತು ಸಾರ್ವತ್ರಿಕ ವ್ಯವಸ್ಥೆಯಲ್ಲಿ ಬದುಕುವ ಮನಸ್ಥಿತಿ ಮತ್ತು ನಡವಳಿಕೆಯಲ್ಲಿ ಅಭಿವೃದ್ಧರಾಗಿರುತ್ತಾರೆ.

6. ಸಂಯಮದ ಬೆಳಕಿನಲ್ಲಿ

a) ಸಮಾಧಿಯ ವಿಮರ್ಶೆ:

ಹಿಂದಿನ ಸ್ಥಿತಿಯಲ್ಲಿ (ಧಾರಣ ಮತ್ತು ಧ್ಯಾನ) ಅನುಭವಿಸದ ಕೆಲವು ಹೊಸ ಅನುಭವಗಳು ಸಮಾಧಿಯಲ್ಲಿ ಸಂಭವಿಸಿದವು. ಸಮಾಧಿ ಸ್ಥಿತಿಯಲ್ಲಿ ಎಲ್ಲಾ ಪ್ರಶ್ನೆಗಳು ಕಣ್ಮರೆಯಾಗುತ್ತವೆ. ಬೇರೆ ರೀತಿಯ ಒಂದು ತೃಪ್ತಿಯೂ ಇತ್ತು; ಅದು ಶರೀರ ಅಧ್ಯಾಸ ಬಂದ ನಂತರವೂ ಉಳಿಯಿತು. ಆದರೆ ಶರೀರ ಅಧ್ಯಾಸ ಬಂದ ನಂತರ, ಮತ್ತೆ ಅನೇಕ ಹಳೆಯ ಪ್ರಶ್ನೆಗಳು ಪುನಃ ಉದ್ಭವಿಸಿದವು ಮತ್ತು ಪ್ರಶ್ನೆಗಳಿಗೆ ಉತ್ತರಗಳು ಕಂಡುಬಂರಲಿಲ್ಲ. ಆದ್ದರಿಂದ ಸಂಯಮದ ಅಗತ್ಯವಿತ್ತು. ಸಂಯಮ ಮಾಡಿದ ನಂತರ " ನಾನು ಸ್ವಯಂ ಸಮಾಧಿಯ ದೃಷ್ಟನಾದೆನು". ಈ ದೃಷ್ಟ-ಪದದಲ್ಲಿ ಸಮಾಧಿ ಮತ್ತು ಸಂಯಮದ ಅನುಭವದ ನಡುವೆ ಸಾಮಾನ್ಯ ಹೋಲಿಕೆಯನ್ನು ಮಾಡಬಹುದು.

1. ಸಂಯಮದ ಸ್ಥಿತಿಯಲ್ಲಿ, ವ್ಯಾಪಕ ವಸ್ತುವಿನಲ್ಲಿರುವ ಎಲ್ಲಾ ಘಟಕಗಳು ಮುಳುಗಿ, ನೆನೆದು ಮತ್ತು ಸುತ್ತುವರೆದಿರುವಂತೆ ಕಂಡುಬರುತ್ತವೆ. ಆದರೆ ಸಮಾಧಿ ಸ್ಥಿತಿಯಲ್ಲಿ ಯಾವುದೇ ಘಟಕದ ಚಿತ್ರಣವಿರುವುದಿಲ್ಲ. ಆದ್ದರಿಂದ ವ್ಯಾಪಕ ವಸ್ತು ಮತ್ತು ಘಟಕದ ನಡುವಿನ ಸಂಬಂಧವು ಅಸ್ಪಷ್ಟವಾಗಿಯೇ ಉಳಿದಿರುತ್ತದೆ.
2. ವ್ಯಾಪಕ ವಸ್ತುವಿನ ಘಟಕದಲ್ಲಿನ ಪ್ರವೇಶಸಾಧ್ಯತೆ ಮತ್ತು ವ್ಯಾಪಕ ವಸ್ತು ಸ್ವಯಂ ನಿರಪೇಕ್ಷ ಊರ್ಜೆ ಆಗಿರುವುದು ಅಸ್ಪಷ್ಟವಾಗಿತ್ತು.
3. ಪ್ರಕೃತಿಯ ಮೂಲ ಘಟಕ ಪರಮಾಣು, ಪರಮಾಣು ಸ್ವಯಂ ವ್ಯವಸ್ಥೆ ಆಗಿರುವುದು, ಸಂಪೂರ್ಣ ಅಸ್ತಿತ್ವ ವ್ಯವಸ್ಥೆಯ ರೂಪದಲ್ಲಿ ನಿತ್ಯ ವರ್ತಮಾನವಾಗಿರುವುದು ಅಸ್ಪಷ್ಟವಾಗಿತ್ತು.
4. ಘಟಕದಲ್ಲಿ ರಚನೆಯ ಸಂಪೂರ್ಣತೆ, ಕ್ರಿಯೆಯ ಸಂಪೂರ್ಣತೆ ಮತ್ತು ನಡವಳಿಕೆಯ ಸಂಪೂರ್ಣತೆ ಆಗುವುದು ಅಸ್ಪಷ್ಟವಾಗಿತ್ತು.
5. ರಚನೆ- ಸಂಪೂರ್ಣವಾಗಿರುವ ಪರಮಾಣುವಿನಲ್ಲಿಯೇ (ಜೀವನ ಘಟಕದಲ್ಲಿಯೇ) ಜಾಗೃತಿ (ಕ್ರಿಯೆ ಸಂಪೂರ್ಣತೆ) ಮತ್ತು ನಡವಳಿಕೆಯ ಸಂಪೂರ್ಣತೆ ಆಗುವುದು ಅಸ್ಪಷ್ಟವಾಗಿತ್ತು.
6. ಘಟಕದಲ್ಲಿ ಚೈತನ್ಯತೆಯ ಮುಖ್ಯ ಕಾರಣ ವ್ಯಾಪಕ ವಸ್ತು, ಹಾಗು ವ್ಯಾಪಕ ವಸ್ತು ಸ್ವಯಂ ಚೇತನ ಆಗಿರುವುದು ಅಸ್ಪಷ್ಟವಾಗಿತ್ತು.
7. ಜೀವನಂದಲ್ಲಿ ಸ್ವ ಅಸ್ತಿತ್ವದ ಸ್ವೀಕರಿಸಿರುವುದರ ಜೊತೆ ಅನುಭವ ಆಗುವುದು ಸ್ಪಷ್ಟವಾಗದೆ ಇರುವ ಕಾರಣ, ವ್ಯಾಪಕ ವಸ್ತು ಸ್ವಯಂ ಜ್ಞಾನ ಎಂಬುವುದು ಅಸ್ಪಷ್ಟವಾಗಿತ್ತು.
8. ಜೀವನವೇ ದೃಷ್ಟ, ಕರ್ತಾ, ಭೋಕ್ತ ಪದದಲ್ಲಿರುವುದು ಅಸ್ಪಷ್ಟವಾಗಿತ್ತು.
9. ಜಾಗೃತ  ಮಾನವರ ಸಭೆಯೇ ಸಂಪ್ರಭುತ ಮತ್ತು ಪ್ರಭುಸತ್ತಾ ಆಗಿರುವುದು ಅಸ್ಪಷ್ಟವಾಗಿತ್ತು.
10. ಸ್ಥಿತಿ ಸತ್ಯ, ವಸ್ತು ಸ್ಥಿತಿ ಸತ್ಯ ಮತ್ತು ವಸ್ತುಗತ ಸತ್ಯ, ಇವು ಅಸ್ಪಷ್ಟವಾಗಿತ್ತು.
11. ಅಸ್ತಿತ್ವವೇ ಸಹ - ಅಸ್ತಿ ತ್ವ ಆಗಿರುವುದು ಮತ್ತು ನಿಯತಿಕ್ರಮ ಇರುವುದು ಅಸ್ಪಷ್ಟವಾಗಿತ್ತು.
12. ಅಧ್ಯಯನ ವಿಧಾನದಿಂದ ಮಾನವ ಜಾಗೃತ ಆಗುವುದು ಮತ್ತು ಜಾಗೃತಿಯ ಪರಂಪರೆ ಆಗುವುದು ಅಸ್ಪಷ್ಟವಾಗಿತ್ತು

b) ಪರಂಪರೆಯಿಂದ ಭಿನ್ನತೆಗಳು ಮತ್ತು ವಿಕಲ್ಪ

1. ಸಮಾಧಿ ಸ್ಥಿತಿಯಲ್ಲಿ, ಆಸೆ, ಆಲೋಚನೆ ಮತ್ತು ಇಚ್ಛೆಗಳು ಮೌನವಾಯಿತು ಆದರೆ ದೇಹ ಅಧ್ಯಾಸ ಬಂದಾಗ, ಆಸೆ, ಆಲೋಚನೆ ಮತ್ತು ಇಚ್ಛೆ ಸಂಪೂರ್ಣವಾಗಿ ಸಕ್ರಿಯವಾಯಿತು. ಆದರೆ ಸಂಯಮದಲ್ಲಿ ಯಶಸ್ಸಿನ ನಂತರ ಉಂಟಾದ ಜಾಗೃತಿ ಸ್ಥಿತಿಯಲ್ಲಿ ಇವು ನಿರಂತರವಾಗಿ ಇದ್ದವು.
2. ಸಮಾಧಿಯ ನಂತರ, ಎಲ್ಲಾ ಚಟುವಟಿಕೆಗಳಿಂದ ಮನಸ್ಸು ವಿರಕ್ತವಾಗಿತ್ತು ಆದರೆ ಸಂಯಮದಲ್ಲಿ ಯಶಸ್ಸಿನ ನಂತರ, ವ್ಯವಹಾರ, ಉತ್ಪಾದನೆ, ವಿನಿಮಯ, ಸೇವೆ ಇತ್ಯಾದಿ ಎಲ್ಲಾ ಚಟುವಟಿಕೆಗಳಲ್ಲಿಯೂ ಪ್ರವೃತ್ತಿ ಉಳಿಯುತ್ತದೆ.
3. ಸಂಯಮದ ಪರಿಣಾಮವಾಗಿ,ಕನಿಷ್ಠ ಮೂರು ತಲೆಮಾರುಗಳ ಕುಟುಂಬದಲ್ಲಿ ವಾಸಿಸುವುದು ಮತ್ತು ಉತ್ಪಾದನೆ**,** ವಿನಿಮಯ**,** ನ್ಯಾಯ**-**ರಕ್ಷಣೆ**,** ಆರೋಗ್ಯ**-**ಸಂಯಮ ಮತ್ತು ಶಿಕ್ಷಣವೇ ಸಂಪೂರ್ಣ ಕಾರ್ಯಕ್ರಮಗಳು**,** ಎಂದು ಸ್ಪಷ್ಟವಾಯಿತು ಮತ್ತು ಇವುಗಳಲ್ಲಿ ಬಾಳುವ ಪ್ರವೃತ್ತಿ ಉಂಟಾಯಿತು**.**
4. ಸಾರ್ವತ್ರಿಕ**,** ಶಾಶ್ವತ**,** ಎಲ್ಲರೂ ಬಾಳಲು ಯೋಗ್ಯ ಮತ್ತು ಅರ್ಥಮಾಡಿಕೊಳ್ಳಲು ಯೋಗ್ಯವಾಧ ಅರಿವು ಎಂದು ಸ್ಪಷ್ಟವಾಯಿತು**.** ಇದರ ಆಧಾರದ ಮೇಲೆ**,** ಶಿಕ್ಷಣ ಮತ್ತು ವ್ಯವಸ್ಥೆಯ ವಸ್ತು ಮತ್ತು ನಿಯಮಗಳು**,** ವಿಧಾನಗಳು ಸ್ಪಷ್ಟವಾಯಿತು
5. ನೈಸರ್ಗಿಕ**,** ಸಾಮಾಜಿಕ ಮತ್ತು ಬೌದ್ಧಿಕ ನಿಯಮಗಳು ಸ್ಪಷ್ಟವಾದವು**.**

ತಿಳಿಸುವ ಮೂಲ ಉದ್ದೇಶವೆಂದರೆ

1. ಅಗ್ರಹಾರ ನಾಗರಾಜ್ ಬಾಬಾಜಿ ಸಮಾಧಿಯನ್ನು ಪರಂಪರೆಗಿಂತ ಹೆಚ್ಚು ಸ್ಪಷ್ಟವಾಗಿ ವಿವರಿಸಿದ್ದಾರೆ.
2. ಸಮಾಧಿಯ ನಂತರವೂ ಪರಂಪರೆಯ ಯಾವ ಭಾಗ ಗುರಿತು ಒಪ್ಪಿಗೆ ಆಗಲಿಲ್ಲ. ಹಾಗು
3. ಸಂಯಮದ ನಂತರ ಸಮಾಧಿಯ ವಿವರ ಮತ್ತು ಅದರಲ್ಲಿ ಏನು ತಿಳಿಯಿತು ಎಂಬುವುದರ ವಿವರ ಸ್ಪಷ್ಟಗೊಳಿಸಿದ್ದಾರೆ.